ಇ) ಪುರಸಭೆಯವರು ಸರಿಯಾದ ದಾಖಲಾತಿ ಮಾಡಲು ವಿಫಲವಾಗಿದ್ದರಿಂದ ಆಶ್ರಯ ಸಮಿತಿ ಪ್ರಗತಿಯಿಂದ ಕೆಲಸ ಮಾಡಲು ಯಾವ ರೀತಿಯ ಪರ್ಯಾಯ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ) ಪ್ರಗತಿಗೆ ಅನುಗುಣವಾಗಿ ಹಣವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲಾಗಿರುತ್ತದೆ.

ಆ) ದಾಖಲೀಕರಣ ಪೂರ್ಣಗೊಳಿಸಲು ನಿರ್ದೇಶನ ನೀಡಲಾಗಿದೆ. ಅದು ಪೂರ್ಣಗೊಂಡಿರುವ ಬಗ್ಗೆ ಈವರೆವಿಗೂ ಮುಖ್ಯಾಧಿಕಾರಿ, ಪುರಸಭೆ, ಹುಣಸೂರು ರವರಿಂದ ವರದಿ ಬರಬೇಕಿದೆ. ಮನೆಗಳು ಪೂರ್ಣವಾಗಿರುವುದಕ್ಕೆ ಹಣವನ್ನು ಈಗಾಗಲೇ ಹಂತಹಂತವಾಗಿ ಹಾಗೂ ಪ್ರಗತಿಗನುಗುಣವಾಗಿ ಬಿಡುಗಡೆ ಮಾಡಲಾಗಿದೆ.

ಇ) ಪುರಸಭೆಯವರು ಸರಿಯಾದ ದಾಖಲಾತಿಗಳನ್ನು ನಿರ್ವಹಿಸುವುದು ಅವರ ಆದ್ಯ ಕರ್ತವ್ಯ. ಇದರಲ್ಲಿ ಪರ್ಯಾಯ ವ್ಯವಸ್ಥೆ ಮಾಡಲು ಅವಕಾಶವಿರುವುದಿಲ್ಲ. ಪುರಸಭೆಯವರಿಗೆ ತಾಕೀತು ಮಾಡಿ ದಾಖಲೀಕರಣ ಕಾರ್ಯ ಕೂಡಲೇ ನಡೆಸಲು ಸೂಚನೆ ನೀಡಲಾಗಿದೆ.

ರಾಜ್ಯದಲ್ಲಿ ಶಾಲೆಗಳ ಸಮಯ

1765 (2016) ಶ್ರೀ ಪಾಪಣ್ಣ ವಿ (ಹುಣಸೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿರುವ ಎಲ್ಲಾ ಪ್ರಾಥಮಿಕ ಶಾಲೆಯು ಬೆಳಿಗ್ಗೆ ಯಾವ ಸಮಯದಲ್ಲಿ ಪ್ರಾರಂಭವಾಗುತ್ತದೆ?

2) ಎಲ್ಲಾ ಜಿಲ್ಲೆಯಲ್ಲೂ ಒಂದೇ ಸಮಯವೇ ಅಥವಾ ಬೇರೆ ಸಮಯವೇ (ಜಿಲ್ಲಾವಾರು ವಿವರ ನೀಡುವುದು)

3) ಮೈಸೂರು ಜಿಲ್ಲಾ ಪಂಚಾಯತ್ ಈ ವಿಷಯದಲ್ಲಿ ಗೊಂದಲ ಮೂಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಬಂದಿದ್ದಲ್ಲಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಪ್ರೋ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

1) ಜಿಲ್ಲಾ ಪಂಚಾಯತ್‌ಗಳಿಗೆ ವೇಳೆ ನಿಗದಿಪಡಿಸುವ ಅಧಿಕಾರ ನೀಡಿದೆ.

2) ಜಿಲ್ಲಾ ಪಂಚಾಯತ್‌ಗೆ ಅಧಿಕಾರ ನೀಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

3) ಬಂದಿರುವುದಿಲ್ಲ

4) ಪ್ರಶ್ನೆ ಉದ್ಭವಿಸುವುದಿಲ್ಲ.

ಹುಣಸೂರು ಪಟ್ಟಣದ ಕಿರಿಯ ಕಾಲೇಜಿನಲ್ಲಿರುವ ವೃತ್ತಿಪರ ಶಿಕ್ಷಣ

1766 (2017) ಶ್ರೀ ಪಾಪಣ್ಣ ವಿ (ಹುಣಸೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಪಟ್ಟಣದ ಕಿರಿಯ ಕಾಲೇಜಿನಲ್ಲಿರುವ ವೃತ್ತಿಪರ ಶಿಕ್ಷಣದ ವಿವಿಧ ಪಠ್ಯ ಕ್ರಮಗಳ (ಕೋರ್ಸ್) ವಿವರಗಳೇನು?

ಆ) ಹುಣಸೂರು ಉಪ ವಿಭಾಗದ ಕೇಂದ್ರವಾಗಿದ್ದು ಹೆಚ್.ಡಿ. ಕೋಟೆ, ಪಿರಿಯಾಪಟ್ಟಣ, ಕೆ.ಆರ್. ನಗರ, ಹುಣಸೂರು ಆಗತ್ಯವಿರುವ ವೃತ್ತಿಪರ ಶಿಕ್ಷಣದ ಹೆಚ್ಚಿನ ಬ್ರಾಂಚುಗಳು ಪ್ರಾರಂಭಿಸಲು ತೊಂದರೆಯೇನು?

ಪ್ರೋ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಹುಣಸೂರು ಪಟ್ಟಣದಲ್ಲಿ 2 ಪದವಿ ಪೂರ್ವ ಕಾಲೇಜುಗಳಿದ್ದು, ಅವುಗಳಲ್ಲಿ ಕಂಪ್ಯೂಟರ್ ಟೆಕ್ನಿಕ್, ಎಲೆಕ್ಟ್ರಿಕಲ್ ವೈರಿಂಗ್, ಸರ್ವೇಯಿಂಗ್ ಮತ್ತು ಗ್ರಂಥಾಲಯ ವಿಜ್ಞಾನ ಕೋರ್ಸ್‌ಗಳಿದೆ.

ಆ) ಈಗ ಹೊಸ ಕೋರ್ಸ್ ಮಂಜೂರು ಮಾಡುತ್ತಿಲ್ಲ. ಆದರೆ ಮೂಲಭೂತ ಸೌಲಭ್ಯಗಳನ್ನು ಸ್ಥಳೀಯರು ಒದಗಿಸಿದಲ್ಲಿ, ಸ್ಥಳಾಂತರ ಮೂಲಕ ಹೊಸ ಬ್ರಾಂಚ್ (ಕೋರ್ಸ್) ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಹುಣಸೂರು ತಾಲ್ಲೂಕಿನಲ್ಲಿ ಸ್ವಚ್ಛಗ್ರಾಮದ ಕಾಮಗಾರಿ

1767 (2077) ಶ್ರೀ ಪಾಪಣ್ಣ ವಿ (ಹುಣಸೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ತಾಲ್ಲೂಕಿನಲ್ಲಿ ಸ್ವಚ್ಛ ಗ್ರಾಮದ ಕಾಮಗಾರಿಯನ್ನೂ ಭೂ ಸೇನಾ ನಿಗಮಕ್ಕೆ ವಹಿಸಿರುವುದು ನಿಜವಲ್ಲವೇ;

ಆ) ಸ್ವಚ್ಛಗ್ರಾಮ ಪಂಚಸೂತ್ರ ಮೊದಲನೆ ಆದ್ಯತೆಯಾದ ಗೊಬ್ಬರ ಗುಂಡಿ ಸ್ಥಳಾಂತರ, ಹೊಗೆರಹಿತ ಒಲೆ, ಶೌಚಾಲಯ ಈ ಮೂರು ಪಂಚಸೂತ್ರ ಕೈಬಿಟ್ಟು ಚರಂಡಿ ರಸ್ತೆಗಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಭೂ ಸೇವಾ ನಿಗಮದವರು ಕೆಲವು ಖಾಸಗಿ ಗುತ್ತಿಗೆದಾರರಿಗೆ ಕಾಮಗಾರಿ ಮಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದರೆ ಭೂ ಸೇನಾ ನಿಗಮಕ್ಕೆ ಸರ್ಕಾರ ಸೂಕ್ತ ನಿರ್ದೇಶನ ನೀಡುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಹುಣಸೂರು ತಾಲ್ಲೂಕಿನಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿ ಅನುಮೋದನೆಯಾಗಿರುವ 12 ಗ್ರಾಮಗಳ ಪೈಕಿ 8 ಗ್ರಾಮಗಳಲ್ಲಿ ಕಾಮಗಾರಿಗಳ ಅನುಷ್ಠಾನವನ್ನು ಕರ್ನಾಟಕ ಭೂ ಸೇನಾ ನಿಗಮ ನಿಯಮಿತಕ್ಕೆ ವಹಿಸಲಾಗಿದೆ. ಇನ್ನುಳಿದ 4 ಗ್ರಾಮಗಳಲ್ಲಿ ಕಾಮಗಾರಿಗಳ ಅನುಷ್ಠಾನವನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ವಹಿಸಲಾಗಿದೆ.

ಆ) ಗೊಬ್ಬರ ಗುಂಡಿಗಳನ್ನು ಸ್ಥಳಾಂತರಿಸಲಾಗುತ್ತಿದೆ. ರಸ್ತೆ ಮತ್ತು ಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿವೆ, ಸದರಿ ಕಾಮಗಾರಿಗಳು ಪೂರ್ಣಗೊಂಡನಂತರ, ಗ್ರಾಮಸ್ಥರಿಂದ ಬಾಕಿ ವಂತಿಗೆಯನ್ನು ಸಂಗ್ರಹಿಸಿ, ಹೊಗೆರಹಿತ ಒಲೆಗಳನ್ನು ಮತ್ತು ಶೌಚಾಲಯಗಳನ್ನು ಒದಗಿಸಲು ಉದ್ದೇಶಿಸಿದೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಸಂಗೀತ ಮತ್ತು ನೃತ್ಯೋತ್ಸವ ಕಾರ್ಯಕ್ರಮ

1768 (2039) ಶ್ರೀ ಪಾಟೀಲ್ ಡಿ.ಆರ್. (ಗದಗ್) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸಂಗೀತ ಮತ್ತು ನೃತ್ಯೋತ್ಸವಗಳು ನಡೆಯುವ ಹಾಗೆ ಉಳಿದ ಜಿಲ್ಲಾ ಕೇಂದ್ರಗಳಲ್ಲಿಯೂ ಸಹ ಕನಿಷ್ಠ ತಿಂಗಳಿಗೊಮ್ಮೆ ಇಂತಹ ಕಾರ್ಯಕ್ರಮಗಳು ನಡೆಯುವ ಹಾಗೆ ಕ್ರಮ ಕೈಗೊಳ್ಳಲಾಗುವುದೇ?